ಇ) ೧೯೮೨-೮೩...ರಾಜ್ಯದಲ್ಲಿ ಒಟ್ಟು ಷಿ ಕಟ್ಟಡಗಳು (ಶಿ ಲೋಕೋಪಯೋಗಿ ಇಲಾಖೆ ಮೂಲಕ ಮತ್ತು ಷಿ ಎನ್.ಆರ್.ಇ.ಪಿ. ಮೂಲಕ)
೧೯೮೩-೮೪...ರಾಜ್ಯದಲ್ಲಿ ಒಟ್ಟು ೫೦ ಕಟ್ಟಡಗಳು ಎನ್.ಆರ್.ಇ.ಪಿ. ಮೂಲಕ

ಶ್ರೀ ನಾರಾಯಣರಾವ್ ಮಾನಪಳ್ಳಿ...ಬೀದರ್ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ಕಟ್ಟಡಗಳು ಇವೆಯೇ ಎಂದು ಹೇಳಿದ್ದೀರಿ ರಾಜ್ಯದ ಬಗ್ಗೆ ಅಲ್ಲ.

ಶ್ರೀಮತಿ ಚಂದ್ರಪ್ರಭಾ ಅರಸ್...ಅಲ್ಲಿ ಸ್ವಂತ ಕಟ್ಟಡಗಳು ಇಲ್ಲ. ಇದುವರೆಗೆ ಐದು ಹಾಸ್ಟಲ್ ನಡೆಯುತ್ತಿರುವುದು ಬಾಡಿಗೆ ಕಟ್ಟಡದಲ್ಲಿ ಆದರೆ ಅವಶ್ಯಕತೆ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರತಿ ವರ್ಷ ಹೆಚ್ಚಿನ ಹೊಣಕಾಸಿನ ವ್ಯವಸ್ಥೆ ಇಲ್ಲದಿರುವುದರಿಂದ ಎನ್.ಆರ್.ಇ.ಪಿ. ಬಾಬಿನಿಂದ ಹೆಚ್ಚಿನ ಹಣವನ್ನು ಪಡೆದುಕೊಂಡು ೧೯೮೩-೮೪ರಲ್ಲಿ ಪ್ರಾರಂಭ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆ. ೫೦ ಕೋಟಿ ರೂಪಾಯಿಗಳನ್ನು ಎನ್.ಆರ್.ಇ.ಪಿ. ಮತ್ತು ನಮ್ಮ ಇಲಾಖಾವತಿಯಿಂದ ಹಣ ವಿರ್ಚು ಮಾಡಿ ವಿದ್ಯಾರ್ಥಿನಿಲಯಗಳಿಗೆ ಕಟ್ಟಡಗಳನ್ನು ಪ್ರಾರಂಭ ಮಾಡಿ ಶಕ್ತಿಯಾದ್ದು ಸರ್ಕಾರದ ಯೋಚನೆಯಲ್ಲಿದೆ.

ಹರಿಜನ-ಗಿರಿಜನ ಅಭಿವೃದ್ಧಿಗಾಗಿ ಸಹಾಯ ಧನ ಕೊಡುತ್ತಿರುವದನ್ನು ಕುರಿತು

೪೧೩ (೧೧೨೦) ಶ್ರೀ ಕೆ. ರಾಮಭಟ್ (ಪುತ್ತೂರು)...ಮಾನ್ಯ ಸಮಾಜ ಕಲ್ಯಾಣ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯ ಸರ್ಕಾರವು ಹರಿಜನ-ಗಿರಿಜನ ಅಭಿವೃದ್ಧಿಗಾಗಿ ಹಾಕಿಕೊಂಡ ಕಾರ್ಯಕ್ರಮದಲ್ಲಿ ಗಿರಿಜನರಿಗೆ ಶೇಖಡ ೫೦ ಮತ್ತು ಹರಿಜನರಿಗೆ ಶೇಖಡ ಷಿ ೧೫ ಸಹಾಯ ಧನ ಕೊಡುತ್ತಿರುವುದು ನಿಜವೇ ?

ಆ) ಹರಿಜನರು ಗಿರಿಜನರಿಗಿಂತ ಮುಂದುವರೆದವರೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆಯೇ ?

ಇ) ಗಿರಿಜನರಿಗೆ ಕೊಡುವಷ್ಟೇ ಸಹಾಯ ಧನವನ್ನು ಹರಿಜನರಿಗೂ ೧೯೮೪-೮೫ರಲ್ಲಿ ಕೊಡಲಾಗುವುದೇ ?

ಶ್ರೀಮತಿ ಚಂದ್ರಪ್ರಭಾ ಅರಸು (ಸಮಾಜ ಕಲ್ಯಾಣ ಮತ್ತು ರೇಷ್ಮೆ ಮಂತ್ರಿಗಳು)...

ಅ) ನಿಜ.

ಆ) ಇಲ್ಲ.

ಇ) ಇಲ್ಲ.

ಶ್ರೀ ಕೆ. ರಾಮಭಟ್...ಮಾನ್ಯ ಅಧ್ಯಕ್ಷರೇ, ಇದರಲ್ಲಿ ಹರಿಜನರಿಗೆ, ಗಿರಿಜನರಿಗೆ ಸಬ್ಸಿಡಿ ಕೊಡುವುದರ ಬಗ್ಗೆ ಕೇಳಿದ್ದೇನೆ. ಹರಿಜನರಿಗೆ ಷಿ.೧೫ ರಷ್ಟು ಸಬ್ಸಿಡಿ ಕೊಡುತ್ತಿರುವುದು ಸ್ವಲ್ಪ ಕಡಿಮೆ ಇರಬಹುದು. ಗಿರಿಜನರಿಗೆ ಶೇಕಡ ೫೦ರಷ್ಟು ಸಬ್ಸಿಡಿ ಕೊಡುತ್ತಾರೆ. ಹರಿಜನರು ಮುಂದುವರೆದವರು, ಗಿರಿಜನರು ಹಿಂದುಳಿದವರು ಎಂದು ತಿಳಿದುಕೊಂಡು ಹೀಗೆ ಮಾಡುತ್ತಿದ್ದೀರಾ? ಇದರಲ್ಲಿ ತಾರತಮ್ಯ ಏಕೆ ಮಾಡುತ್ತೀರಿ ? ನಮ್ಮ ಜಿಲ್ಲೆಯಲ್ಲಿ ಗಿರಿಜನರು ಮುಂದುವರೆದಿದ್ದಾರೆ, ಹರಿಜನರು ಬಹಳ ಹಿಂದುಳಿದಿದ್ದಾರೆ. ಆದುದರಿಂದ ಇದನ್ನು ರಿವರ್ಸ್ ಮಾಡುವುದು ಯೋಚನೆ ಮಾಡುತ್ತೀರಾ ? ಇದರಲ್ಲಿ ಅನ್ಯಾಯವಾಗಿದೆ ಮತ್ತು ತಾರತಮ್ಯ ಉಂಟು. ಆದಕ್ಕೋಸ್ಕರ ಈ ಪ್ರಶ್ನೆಯನ್ನು ಕೇಳಿದ್ದೇನೆ. ಆದುದರಿಂದ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೀರಾ?

ಶ್ರೀಮತಿ ಚಂದ್ರಪ್ರಭಾ ಅರಸು...ಮಾನ್ಯ ಅಧ್ಯಕ್ಷರೇ, ಅವರೇ ಹೇಳಿದಹಾಗೆ, ಗಿರಿಜನರು ಅಂದರೆ ಸರ್ವೇಸಾಮಾನ್ಯವಾಗಿ, ಗುಡ್ಡಗಾಡುಗಳಲ್ಲಿ, ನಾಗರಿಕ ಸಮಾಜದ ಸಂಪರ್ಕ ಇಲ್ಲದೆ ಇರತಕ್ಕಂಥವರು, ರಸ್ತೆಗಳಿಲ್ಲ, ಸಾರಿಗೆ ವ್ಯವಸ್ಥೆ ಸೌಲಭ್ಯವಿಲ್ಲ. ಅಂತಹ ಗುಡ್ಡಗಾಡು ಪ್ರದೇಶದಲ್ಲಿ ವಾಸ ಮಾಡುತ್ತಿರುವುದರಿಂದ ಅವರಿಗೆ ಕೆಲವು ಸೌಲಭ್ಯಗಳನ್ನು ಹೆಚ್ಚು ಕೊಡಬೇಕೆಂದು ಸರ್ಕಾರ ನಿರ್ಣಯ ಮಾಡಿಕೊಟ್ಟಿದೆ. ಕೆಲವು ಭಾಗದಲ್ಲಿ ಹರಿಜನರು ಕೆಳಮಟ್ಟದಲ್ಲಿದ್ದಾರೆಂದು ಮಾನ್ಯ ಸದಸ್ಯರು

ಹೇಳಿದ್ದಾರೆ. ಅವರಿಗೂ ಕೂಡ ಹೆಚ್ಚು ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ರೇಷ್ಮೆ ಇಲಾಖೆ ಮುಂತಾದ ಇಲಾಖೆಗಳಲ್ಲಿ ಮುಖ್ಯತ್ವಾಗಿ ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ಇವರಿಗೆ ಕಟ್ಟಡಗಳನ್ನು ಕಟ್ಟುವುದು, ಬಿತ್ತನೆ ಬೀಜ ಕೊಡುವುದು, ಮುಂತಾದ ಕಾಂಪೊನೆಂಟ್ ಕಾರ್ಯಕ್ರಮಗಳಲ್ಲಿ ಹೆಚ್ಚಿನ ರಿಯಾಯಿತಿ ಕೊಡುತ್ತಿದ್ದೇವೆ. ಸರ್ವೇಸಾಮಾನ್ಯವಾಗಿ ಗಿರಿಜನರ ಸಾಮಾಜಿಕ ಪರಿಸ್ಥಿತಿ ಬಹಳ ಹಿಂದುಳಿದಿದೆ. ಅದೇರೀತಿ ಹರಿಜನರೂ ಹಿಂದುಳಿದಿದ್ದಾರೆ. ಈ ಬಗ್ಗೆ ಇನ್ನೂ ಹೆಚ್ಚಿನ ಅನುಕೂಲ ಮಾಡಿಕೊಡುವುದರ ಬಗ್ಗೆ ಮುಂದೆ ಏನಾದರೂ ಪರಿಶೀಲನೆಗೆ ಬಂದಾಗ ಕೇಂದ್ರಸರ್ಕಾರದ ಅನುಮತಿ ಪಡೆಯಬೇಕಾಗಿರುತ್ತದೆ. ಆಗ ಇದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ರಾಮಭಟ್.—ಅವರ ಅಸೆಸ್‌ಮೆಂಟ್ ಸರಿಯಲ್ಲ.

ಅಧ್ಯಕ್ಷರು.—ಇದು ಕೇಂದ್ರ ಸರ್ಕಾರದವರು ನಿರ್ಧರಿಸಬೇಕಾದ ಅಂಶವೆಂದು ಹೇಳಿದ್ದಾರೆ.

ಶ್ರೀ ಕೆ. ರಾಮಭಟ್.—ಕೆಲವು ಅಂಶಗಳಲ್ಲಿ ರಾಜ್ಯಸರ್ಕಾರದ ಪಾತ್ರವಿದೆ. ಅವರು ನಾಗರೀಕ ಸಮಾಜದ ವ್ಯವಸ್ಥೆಯಿಂದ ದೂರ ಇದ್ದಾರೆ, ಸಾರಿಗೆ ಸಂಪರ್ಕದಿಂದ ದೂರ ಇದ್ದಾರೆ ಎಂದು ಹೇಳುವುದು ಓಬಿರಾಯನ ಕಾಲದ್ದು. ಹಳೆಯ ಕಥೆ. ಈಗ ಅವರು ನಾಗರೀಕರಾಗಿದ್ದಾರೆ. ಸರ್ಕಾರದ ಸೌಲಭ್ಯಗಳನ್ನು ತೆಗೆದುಕೊಂಡು ಮುಂದುವರಿದಿದ್ದಾರೆ. ಆದುದರಿಂದ ಆದಷ್ಟು ತೀವ್ರವಾಗಿ ಇದರ ಬಗ್ಗೆ ಯೋಚನೆ ಮಾಡುತ್ತೀರಾ ?

ಅಧ್ಯಕ್ಷರು.—೫೦ ಪರ್ಸೆಂಟ್ ಇರುವುದನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೀರಾ ?

ಶ್ರೀಮತಿ ಚಂದ್ರಪ್ರಭಾ ಅರಸ್.—ಈಗ ಸಧ್ಯದ ಪರಿಸ್ಥಿತಿ ಹೀಗಿದೆ. ಇನ್ನು ಮುಂದೆ ಹಲವಾರು ವರ್ಷಗಳ ನಂತರ ಅವರು ನಮಗಿಂತಲೂ ಮುಂದುವರಿದರೆ ಏನು ಮಾಡಬೇಕು ಎನ್ನುವುದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಕೆ. ರಾಮಭಟ್.—ನಾನು ಗಿರಿಜನ ವಿರೋಧಿಯಲ್ಲ. ಗಿರಿಜನರಿಗೆ ಎಷ್ಟು ಸೌಲಭ್ಯಗಳನ್ನು ಕೊಡುತ್ತಿರೋ, ಅಷ್ಟೇ ಸೌಲಭ್ಯಗಳನ್ನು ಹರಿಜನರಿಗೂ ಕೊಡಿ. ತಾವು ಇದನ್ನು ರಾಂಗ್ ಇಂಟರ್‌ಪ್ರಿಟ್ ಮಾಡುವುದು ಸರಿಯಲ್ಲ.

ಅಧ್ಯಕ್ಷರು.—ರಾಂಗ್ ಇಂಟರ್‌ಪ್ರಿಟೇಷನ್ ಆಗಿತ್ತು, ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಶ್ರೀ ಕೆ. ಮಲ್ಲಪ್ಪ.—ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಅವರ ಕಾರ್ಪೊರೇಷನ್ನಿನಿಂದ ಕೊಡತಕ್ಕಂಥ ಸವಲತ್ತನ್ನು ಪರಿಶಿಷ್ಟ ವರ್ಗದವರಿಗೆ ನಿಲ್ಲಿಸಿದ್ದಾರೆ ಎನ್ನುತಕ್ಕ ವಿಚಾರ ತಿಳಿದು ಬಂದಿದೆ. ಈ ಬಗ್ಗೆ ಮಾನ್ಯ ಸಚಿವೆಯವರು ಪರಿಶಿಷ್ಟ ವರ್ಗದವರಿಗೆ ಈ ಸವಲತ್ತು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ಎಂದು ಕೇಳುತ್ತೇನೆ ?

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಸದಸ್ಯರು ಯಾವ ನಿರ್ದಿಷ್ಟವಾದ ಪ್ರದೇಶದಲ್ಲಿ ಎಂದು ತಿಳಿಸಿದರೆ, ಅದನ್ನು ಪರಿಶೀಲನೆ ಮಾಡುತ್ತೇನೆ.

ಮಲೆನಾಡು ಪ್ರದೇಶದಲ್ಲಿ ಕೆರೆಗಳನ್ನು ದುರಸ್ತಿಗೊಳಿಸುವುದು

೪೧೫ (೯೫೫) ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮಲೆನಾಡಿನಲ್ಲಿ ೧೦ ಎಕರೆಗಿಂತ ಕಡಿಮೆ ಆಚ್ಚುಕಟ್ಟಿರುವ ಜಮೀನಿಗೆ ಸಂಬಂಧಪಟ್ಟ ಕೆರೆ ದುರಸ್ತಿಗೆ ಸಾಕಷ್ಟು ಹಣ ದೊರೆಯುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ : ಹಾಗಿದ್ದಲ್ಲಿ ಆ ಬಗ್ಗೆ ಸಾಕಷ್ಟು ಹಣ ಒದಗಿಸಲಾಗುವುದೇ ?

ಆ) ಕೆರೆ ಹೂಳು ತೆಗೆಯದೆ ದುರಸ್ತಿ ಮಾಡುವುದರಿಂದ ಮಲೆನಾಡಿನಲ್ಲಿ ಉಪಯೋಗವಾಗುವುದಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?